SC:66/2024
PW:08 CW:04

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 66/2024

| | |
|---|---|
| PW | 08 |
| CW | 04 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 09.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಅನಿಲ್ ಕುಮಾರ್ |
| ತಂದೆಯ ಹೆಸರು | : | ಚನ್ನರಾಯಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕೋನಾಪುರ ಗ್ರಾಮ , ಗೌರಿಬಿದನೂರು |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:'**

ನನಗೆ ಚಾಸಾ.5 ಗೊತ್ತು . ನ್ಯಾಯಾಲಯದ ಮುಂದೆ ಹಾಜರಿರುವ 3 ನೇ ಆರೋಪಿ ಹಾಗೂ ವಿ ಸಿ ಮೂಲಕ ಹಾಜರುಪಡಿಸಿರುವಂತಹ 2 ನೇ ಆರೋಪಿ ನನಗೆ ಗೊತ್ತಿರುವುದಿಲ್ಲ . 1 ನೇ ಆರೋಪಿ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಯ ಬಗ್ಗೆ ಯಾವುದೇ ವಿವಾದ ಮಾಡಿರುವುದಿಲ್ಲ . ಈಗ ನಾನು ನೋಡಿರುತ್ತಿರುವ ದ್ವಿಚಕ್ರ ವಾಹನ ಅಮಾನತ್ತು ಪಂಚನಾಮೆಯಲ್ಲಿರುವ ಸಹಿ ನನ್ನದೇ ಇರುತ್ತದೆ . ಸಾಕ್ಷಿಯು ಗುರುತಿಸಿದ ದ್ವಿಚಕ್ರ ವಾಹನ ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ. 5 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ.5 (ಬಿ ) ಎಂದು ಗುರುತಿಸಲಾಯಿತು.

SC:66/2024
PW:08 CW:04

2. ಸುಮಾರು 2 ವರ್ಷದ ಹಿಂದೆ ಗೌರಿಬಿದನೂರು ನಗರ ಪೊ.ಠಾಣೆಯಲ್ಲಿ ನಿಪಿ.5 ಕ್ಕೆ ಸಹಿ ಮಾಡಿರುತ್ತೇನೆ . ಪೊಲೀಸರು ನನ್ನನ್ನು ಠಾಣೆಯಿಂದ ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ . ನಿಪಿ.5 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ . ಈ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. ದಿಃ01.03.2024 ರಂದು ನನಗೆ ಮತ್ತು ಚಾಸಾ.5 ರವರಿಗೆ ಗೌರಿಬಿದನೂರು ಪೊ.ಠಾಣೆಯವರು ನನ್ನನ್ನು ಕರೆಯಿಸಿದ್ದು ಠಾಣೆಯಲ್ಲಿ ಗೌರಿಬಿದನೂರು ನಗರದ ವಿನಾಯಕ ನಗರದ 1 ನೇ ಆರೋಪಿಯು ತನ್ನ ವಾಸದ ಮನೆಯ ಮುಂಭಾಗದಲ್ಲಿ ಆರೋಪಿಗಳು ಸುಲಿಗೆ ಮಾಡಲು ಬಳಸಿದ್ದ ದ್ವಿಚಕ್ರ ವಾಹನವನ್ನು ಇಟ್ಟಿದ್ದು ಅದನ್ನು ಅಮಾನತ್ತು ಪಡಿಸಿಕೊಳ್ಳಲು ಪಂಚರಾಗಿ ಸಹಕರಿಸುವಂತೆ ಕೋರಿದ್ದು ನಾನು ಒಪ್ಪಿಗೆ ನೀಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಂತರ ನನ್ನನ್ನು ಮತ್ತು ಚಾಸಾ.5 ರವರನ್ನು ಮತ್ತು ಪೊಲೀಸ್ ಸಿಬ್ಬಂಧಿಗಳನ್ನು ಆರೋಪಿತರು ಸರ್ಕಾರಿ ವಾಹನದಲ್ಲಿ ಕರೆದುಕೊಂಡು 1 ನೇ ಆರೋಪಿ ತನ್ನ ವಾಸದ ಮನೆಯ ಮುಂ,ಬಾಗದಲ್ಲಿ ನಿಲ್ಲಿಸಿದ್ದ ದ್ವಿಚಕ್ರವಾಹನವನ್ನು ತೋರಿಸಿದ್ದು ಅದನ್ನು ಬಳಸಿ ದಿಃ25.08.2023 ರಂದು ಗೌರಿಬಿದನೂರು ತಾ.ಕೋನಾಪುರ ಗ್ರಾಮದಲ್ಲಿ ಮಹಿಳೆಯ ಕತ್ತಿನಲ್ಲಿ ಇದ್ದ ಮಾಂಗಲ್ಯ ಸರವನ್ನು ಸುಲಿಗೆ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿ ತೋರಿಸಿದ ದ್ವಿಚಕ್ರ ವಾಹನ ಸಂ. ಕೆಎ-02 ಹೆಚ್ ವೈ 8208 ಕೆಂಪು ಬಣ್ಣದ ಜ್ಯುಪಿಟರ್ ದ್ವಿಚಕ್ರ ವಾಹನವನ್ನು ಅದರ ಮುಂಭಾಗದಲ್ಲಿ ನೊಂದಣಿ ಸಂಖ್ಯೆಯನ್ನು ಕಾಣದಂತೆ ಉಜ್ಜಿರುವ ನಿಶಾನೆ

ಇರುವಂತೆ ಸದರಿ ವಾಹನವನ್ನು ತೋರಿಸಲು ನಮ್ಮ ಸಮಕ್ಷಮ ಸಂಜೆ 5.30 ರಿಂದ 6.15 ಗಂಟೆ ವರೆಗೆ ನಿಪಿ.5 ರಂತೆ ಪಂಚನಾಮೆ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ

3. ನಾನು ಈಗ ಓದಿ ಹೇಳಿದಂತೆ " ದಿಃ01.03.2024 ರಂದು ಸಂಜೆ 05.15 ಗಂಟೆಯಲ್ಲಿ ...................................................................................................

...................................................................................................................

....................ಅಮಾನತ್ತುಪಡಿಸಿಕೊಂಡ ವಾಹವನ್ನು ಮತ್ತು ಆರೋಪಿಗಳನ್ನು ನೋಡಿದ್ದು ಪುನಹಃ ನೋಡಿದರೆ ಗುರುತಿಸುತ್ತೇನೆ " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

4. ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ನಾನು ನಿಪಿ-10 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ .

**<u>ಮರುವಿಚಾರಣೆಃ</u> ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 09.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.